ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದಲ್ಲಿ 1993-94ರಿಂದ 95-96 ರವರೆಗೆ ಹಣ ಬಿಡುಗಡೆ ಮಾಡಿರುವ ಬಗ್ಗೆ.

473 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮಕ್ಕೆ 1993-94, 1994-95 ಹಾಗೂ 1995-96ರಲ್ಲಿ ಯಾವ ಉದ್ದೇಶಕ್ಕಾಗಿ ಎಷ್ಟೆಷ್ಟು ಹಣ ನಿಗದಿಗೊಳಿಸಲಾಗಿತ್ತು;

ಆ) ನಿಗದಿ ಮಾಡಿದ ಈಹಣದಲ್ಲಿ ಬಿಡುಗಡೆಯಾದ ಹಾಗೂ ವೆಚ್ಚವಾದ ಮೊತ್ತವೆಷ್ಟು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಿಗಾಗಿ 1993-94, 1994-95ಮತ್ತು 1995-96ರಲ್ಲಿ ನಿಗದಿಪಡಿಸಲಾದ ಹಣ, ಬಿಡುಗಡೆಯಾದ ಹಣ ಹಾಗೂ ವೆಚ್ಚ ಮಾಡಿದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

ಕ್ರಮ ಸಂಖ್ಯೆ	ಯೋಜನೆ	1993-94			1994-95			1995-96		
		ಆಯವ್ಯಯದಲ್ಲಿ ನಿಗಧಿಪಡಿಸಲಾದ ಹಣ	ಬಿಡುಗಡೆಯಾದ ವೆಚ್ಚ ಮೊತ್ತ		ಆಯವ್ಯಯದಲ್ಲಿ ನಿಗಧಿಪಡಿಸಲಾದ ಹಣ	ಬಿಡುಗಡೆಯಾದ ಮೊತ್ತ	ವೆಚ್ಚ	ಆಯವ್ಯಯದಲ್ಲಿ ನಿಗಧಿಪಡಿಸಲಾದ ಹಣ	ಬಿಡುಗಡೆಯಾದ ಮೊತ್ತ	ವೆಚ್ಚ
01.	ಭೂ ಒಡೆತನ ಯೋಜನೆ	335.00	335.00	361.55	750.00	411.00	326.11	750.00	299.00	293.24
02.	ನೀರಾವರಿ ಕೊಳವೆ ಬಾವಿ ಯೋಜನೆ	248.36	248.36	434.44	720.00	561.82	230.88	600.00	—	401.14
03.	ಸ್ವಯಂ ಉದ್ಯೋಗ ಯೋಜನೆ	567.88	567.88	525.12	1313.00	1735.21	781.19	721.00	458.26	666.21
04.	ಐ.ಎಸ್.ಬಿ. ಯೋಜನೆ	250.00	250.00	268.67	375.00	448.00	373.18	375.00	247.31	268.15
05.	ತರಬೇತಿ ಯೋಜನೆ	25.00	25.00	59.99	180.00	150.00	54.41	180.00	70.50	44.88
06.	ದೇವದಾಸಿ ಪುನರ್ ವಸತಿ ಯೋಜನೆ	232.79	232.79	101.35	440.00	323.00	78.63	440.00	48.50	19.14
07.	ಜಲಗಾರರ ಪುನರ್‌ವಸತಿ ಯೋಜನೆ	—	—	25.98	440.00	240.00	68.98	440.00	352.00	160.66
08.	ತೋಟಗಾರಿಕೆ ಯೋಜನೆ	—	—	—	62.00	62.00	2.46	62.00	15.50	1.21
09.	ಬೀಡಿ ಮಾರಾಟಗಾರರಿಗೆ ನೆರವು	—	—	—	50.00	50.00	48.70	50.00	30.00	24.95
10.	ಗಂಗಾ ಕಲ್ಯಾಣ ಯೋಜನೆ	—	—	—	—	—	—	500.00	—	31.86
	ಒಟ್ಟು	**1659.03**	**1659.03**	**1777.10**	**4330.00**	**3981.03**	**1964.54**	**4118.00**	**1521.07**	**1911.44**